# ಗದ್ದುಗೆಗೆ ಗುದ್ದಾಟ

## ಟ್ವೀಟ್ ವಾರ್



ಶ್ರೀಧರ್ ವಿ
@iimcomic

ಐಪಿಎಲ್‌ನಲ್ಲಿ ಪ್ಲೇಆಫ್ ಸುತ್ತಿಗೆ ಪ್ರವೇಶಿಸುವಂತೆ ಆರ್‌ಸಿಬಿ ಮತ್ತು ಡೆಲ್ಲಿ ಡೇರ್‌ಡೆವಿಲ್ಸ್ ಮೈತ್ರಿ ಮಾಡಿಕೊಂಡಂತಿದೆ ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿಯ ಸರಕಾರ ರಚನೆಯ ಪ್ರಯತ್ನ.



ಸಂಜಯ್ ಪುಗಾಲಿಯಾ
@sanjaypugalia

ಕರ್ನಾಟಕ ರಾಜ್ಯಪಾಲರಾದ ವಜುಭಾಯ್ ವಾಲಾ ಅವರು ಮೊದಲು ಸರಕಾರ ರಚನೆಗೆ ಬಿಜೆಪಿಗೆ ಅವಕಾಶ ನೀಡುತ್ತಾರೋ ಅಥವಾ ಕಾಂಗ್ರೆಸ್-ಜೆಡಿಎಸ್‌ಗೆ ನೀಡುತ್ತಾರೋ ಎಂಬ ಕುತೂಹಲ ಮೂಡಿದೆ. ಬಿಜೆಪಿಗೆ ಒಂದು ಅವಕಾಶ ಸಿಕ್ಕರೂ ತನ್ನ ಸಂಖ್ಯಾಬಲವನ್ನು ಹೆಚ್ಚಿಸಿಕೊಳ್ಳಲು ಎಲ್ಲ ಪ್ರಯತ್ನ ಮಾಡಲಿದೆ.



ಎತಿರಾಜನ್ ಶ್ರೀನಿವಾಸನ್
@Ethirajans

ಸಿದ್ದರಾಮಯ್ಯ ಕೇವಲ ತನ್ನ ಸ್ವಕ್ಷೇತ್ರದಲ್ಲಿ ಮಾತ್ರ ಮುಖಭಂಗ ಅನುಭವಿಸಿಲ್ಲ, ಆದರೆ ಈಗ ತನ್ನ ಪಕ್ಷದ ನಾಯಕರೇ ಮಾಜಿ ಪಕ್ಷದವರ ಮುಂದೆ ಹೀನಾಯವಾಗಿ ಮುಖಭಂಗವಾಗುವಂತೆ ಮಾಡುತ್ತಿದ್ದಾರೆ. ಫಲಿತಾಂಶದ ನಂತರ ಸಿದ್ದರಾಮಯ್ಯನವರ ಮುಖಚರ್ಯೆ ಎಲ್ಲವನ್ನು ಹೇಳುತ್ತಿದೆ.

## ಹಾಲಾಡಿ ಶ್ರೀನಿವಾಸ ಶೆಟ್ಟಿ



ಕುಂದಾಪುರ ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಬಿಜೆಪಿ ಹಾಲಾಡಿ ಶ್ರೀನಿವಾಸ ಶೆಟ್ಟಿ 1,03, 434 ಮತಗಳನ್ನು ಪಡೆಯುವ ಮೂಲಕ ಕಾಂಗ್ರೆಸ್ ಅಭ್ಯರ್ಥಿ ರಾಕೇಶ್ ಮಲ್ಲಿ ವಿರುದ್ಧ 56,405 ಮತಗಳ ಅಂತರದಿಂದ ಗೆಲುವು ಪಡೆದಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ 47,029 ಮತಪಡೆದು ಸೋಲನುಭಿಸಿದ್ದು , ಜೆಡಿಎಸ್ ಅಭ್ಯರ್ಥಿ ತೆಕ್ಕಟ್ಟೆ ಪ್ರಕಾಶ್ ಶೆಟ್ಟಿ 2,712 ಮತ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.

## 55,209

ಮದ್ದೂರಿನಲ್ಲಿ ಜೆಡಿಎಸ್‌ನ ಡಿ.ಸಿ.ತಮ್ಮಣ್ಣ ಕಾಂಗ್ರೆಸ್‌ನ ಪ್ರತಿಸ್ಪರ್ಧಿ ಜಿ.ಎಂ.ಮಧು ಅವರನ್ನು54,030 ಭಾರೀ ಮತಗಳ ಅಂತರದಿಂದ ಮಣಿಸಿದ್ದಾರೆ. ಮಧು 55,209 ಮತಗಳನ್ನು ಗಳಿಸಿದ್ದಾರೆ.

## ಜಿಲ್ಲೆ ವಿಶ್ಲೇಷಣೆ

### ಹಾವೇರಿ



| ಕಾಂಗ್ರೆಸ್ | ಬಿಜೆಪಿ | ಕೆಪಿಜೆಪಿ |
|---|---|---|
| 01 | 04 | 01 |

#### ಚಾರ್‌ಮಿನಾರ್ ಕಟ್ಟಿದ ಕಮಲ

**ಹಾವೇರಿ:** ಕಾಂಗ್ರೆಸ್‌ನ ಭದ್ರಕೋಟೆಯನ್ನು ಛಿದ್ರಗೊಳಿಸಿರುವ ಬಿಜೆಪಿ ಜಿಲ್ಲೆಯ ನಾಲ್ಕು ಕ್ಷೇತ್ರಗಳಲ್ಲಿ ಕಮಲದ ಹೂವು ಅರಳಿಸಿದೆ.

ಹಿರೇಕೇರೂರು ಕ್ಷೇತ್ರದಲ್ಲಿ ಮಾತ್ರ ಕಾಂಗ್ರೆಸ್ ಪಕ್ಷಕ್ಕೆ ಕಷ್ಟದಾಯಕ ಗೆಲವು ಸಿಕ್ಕಿದ್ದು, ರಾಣಿಬೆನ್ನೂರಿನಲ್ಲಿ ಕೆಪಿಜೆಪಿ ಅಭ್ಯರ್ಥಿ ಆರ್. ಶಂಕರ್ ಗೆಲುವಿನ ನಗೆ ಬೀರಿದ್ದಾರೆ. ಬೆಂಗಳೂರಿನಿಂದ ಬಂದು ರಾಣೆಬೆನ್ನೂರಿನಲ್ಲಿ ಕಳೆದ ಬಾರಿಯೇ ಖದರು ತೋರಿದ್ದ ಶಂಕರ್ ಈ ಬಾರಿ ಗೆಲುವಿನ ದಡ ಸೇರಿದ್ದಾರೆ.

ಮುಜರಾಯಿ ಖಾತೆ ಹೊಂದಿದವರು ಗೆಲ್ಲುವುದಿಲ್ಲ ಎಂಬ ಮಾತನ್ನು ಸಚಿವ ರುದ್ರಪ್ಪ ಲಮಾಣಿ ಹಾವೇರಿಯಲ್ಲಿ ಸಾಬೀತು ಮಾಡಿದ್ದಾರೆ. ಅಲ್ಲಿ ಬಿಜೆಪಿಯ ನೆಹರು ಓಲೇಕಾರ ಗೆಲವಿನ ನಗೆ ಬೀರಿದ್ದಾರೆ. ಹಾನಗಲ್ಲಿನಲ್ಲಿ ಹಳೆ ಹುಲಿ ಸಿ.ಎಂ. ಉದಾಸಿ ಹೊಸಬ ಶ್ರೀನಿವಾಸ ಮಾನೆ ಎದುರು ಪ್ರಯಾಸದ ಗೆಲವು ಸಾಧಿಸಿದ್ದಾರೆ. ಮಾನೆ ಹೊರಗಿನವರಾಗಿದ್ದು, ತಹಸೀಲ್ದಾರ್‌ಗೆ ಟಿಕೆಟ್ ಸಿಗದ ಹಿನ್ನೆಲೆ ಗೆಲ್ಲುವುದು ಕಷ್ಟ ಎಂಬ ಮಾತಿದ್ದರೂ ಪ್ರಬಲ ಪೈಪೋಟಿ ನೀಡುವಲ್ಲಿ ಮಾನೆ ಯಶಸ್ವಿಯಾಗಿದ್ದಾರೆ.

ಹಿರೇಕೆರೂರಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ, ಚಿತ್ರನಟ ಬಿ.ಸಿ. ಪಾಟೀಲ ಫೋಟೊ ಫಿನಿಷ್ ಅಂತರದ ಗೆಲವು ಕಾಣುವಲ್ಲಿ ಸಫಲರಾಗಿದ್ದಾರೆ. ಕೊನೆ ಕ್ಷಣದವರೆಗೂ ಸಮಬಲದ ಪೈಪೋಟಿ ಕಂಡ ಇಲ್ಲಿ ಕೊನೆಯದಾಗಿ ಬಿ.ಸಿ. ಪಾಟೀಲರು ಯು.ಬಿ. ಬಣಕಾರ ಎದುರು ಗೆಲವು ಸಾಧಿಸಿದ್ದಾರೆ. ಬ್ಯಾಡಗಿಯಲ್ಲಿ ಎಸ್.ಆರ್. ಪಾಟೀಲರು ಎದುರಾಳಿ ಬಿಜೆಪಿಯ ವಿರುಪಾಕ್ಷಪ್ಪ ಬಳ್ಳಾರಿ ವಿರುದ್ಧ ಸೋಲುಂಡಿದ್ದು ಇಲ್ಲಿ ಬಸವರಾಜ ಶಿವಣ್ಣವರಗೆ ಟಿಕೆಟ್ ನೀಡದ ಫಲವನ್ನು ಕಾಂಗ್ರೆಸ್ ಅನುಭವಿಸಿದೆ.

### ದಾವಣಗೆರೆ



| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ |
|---|---|---|
| 02 | 06 | 00 |

#### ಅರಳಿದ ಕಮಲ ಜೆಡಿಎಸ್ ಶೂನ್ಯ

**ದಾವಣಗೆರೆ:** ಈ ಬಾರಿ ತೋಟಗಾರಿಕಾ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅನಿರೀಕ್ಷಿತ ಸೋಲುಂಡಿದ್ದಾರೆ. ಬಿಜೆಪಿ ಅಭ್ಯರ್ಥಿ ಎಸ್.ಎ.ರವೀಂದ್ರನಾಥ್ ವಿರುದ್ಧ ಮಲ್ಲಿಕಾರ್ಜುನ್ 4,071 ಮತಗಳಿಂದ ಸೋತಿದ್ದಾರೆ. ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಡಾ.ಶಾಮನೂರು ಶಿವಶಂಕರಪ್ಪ 57,709 ಮತಗಳಿಸಿ ಜಯ ಕಂಡರೆ, ಬಿಜೆಪಿಯ ಯಶವಂತರಾವ್ ಜಾದವ್ 40,224 ಮತಗಳಿಸಿ ಕಹಿ ಸವಿದಿದ್ದಾರೆ. ಜಗಳೂರು ಕ್ಷೇತ್ರದಲ್ಲಿ ಬಿಜೆಪಿಯ ಎಸ್.ವಿ.ರಾಮಚಂದ್ರ ಕಾಂಗ್ರೆಸಿನ ಎಚ್.ಪಿ.ರಾಜೇಶ್ ವಿರುದ್ಧ 29 ಸಾವಿರ ಅಂತರದಿಂದ ಗೆದ್ದಿದ್ದಾರೆ. ಚನ್ನಗಿರಿಯಲ್ಲಿ ಬಿಜೆಪಿಯ ಮಾಡಾಳು ವಿರೂಪಾಕ್ಷಪ್ಪ, ಕಾಂಗ್ರೆಸ್‌ನ ವಡ್ನಾಳ್ ರಾಜಣ್ಣರನ್ನು 25,780 ಮತಗಳ ಅಂತರದಿಂದ ಸೋಲಿಸಿದ್ದಾರೆ. ಮಾಯಕೊಂಡ ಬಿಜೆಪಿ ಎನ್.ಲಿಂಗಣ್ಣ ಕಾಂಗ್ರೆಸ್ಸಿನ ಬಸವಂತಪ್ಪರನ್ನು 6,458 ಮತಗಳ ಅಂತರದಿಂದ ಪರಾಭವಗೊಳಿಸಿದ್ದಾರೆ. ಎನ್.ಲಿಂಗಣ್ಣ 50,556 ಮತಗಳಿಸಿದ್ದರೆ, ಕಾಂಗ್ರೆಸ್‌ನ ಕೆ.ಎಸ್.ಬಸವರಾಜ್ 44,098 ಮತಗಳಿಸಿ ಸೋಲು ಒಪ್ಪಿಕೊಂಡಿದ್ದಾರೆ. ಹೊನ್ನಾಳಿ ಕೇತ್ರದಲ್ಲಿ 80,624 ಮತಗಳಿಸಿದ ಬಿಜೆಪಿಯ ಎಂ.ಪಿ.ರೇಣುಕಾಚಾರ್ಯ ವಿರುದ್ಧ ಶಾಸಕ ಡಿ.ಜಿ.ಶಾಂತನಗೌಡ 4,233 ಮತಗಳ ಅಂತರದಿಂದ ಸೋಲುಕಂಡಿದ್ದಾರೆ. ಕಾಂಗ್ರೆಸ್‌ನ ಡಿ.ಜಿ.ಶಾಂತನಗೌಡ 76,391 ಮತಗಳಿಸಿ ಸೋಲಿನ ಕಹಿ ಉಂಡರು. ಹರಿಹರದಲ್ಲಿ ಕಾಂಗ್ರೆಸ್ಸಿನ ಎಸ್. ರಾಮಪ್ಪ 64,801 ಮತಗಳಿಸಿ ನಗೆ ಬೀರಿದರೆ, ಬಿಜೆಪಿಯ ಬಿ.ಪಿ.ಹರೀಶ್ 57,541 ಮತಗಳಿಸಿ ಪರಾಭ ವಗೊಂಡರು. ಹರಪನಹಳ್ಳಿ ಕ್ಷೇತ್ರದಲ್ಲಿ ಬಿಜೆಪಿ ಕರುಣಾಕರ ರೆಡ್ಡಿ ಕಾಂಗ್ರೆಸ್‌ನ ಶಾಸಕ ಎಂ.ಪಿ.ರವೀಂದ್ರ ವಿರುದ್ಧ 6,884 ಮತಗಳ ಅಂತರದಿಂದ ಜಯ ಸಾಧಿಸಿದ್ದಾರೆ. ಕರುಣಾಕರ ರೆಡ್ಡಿ 57,821 ಮತಗಳಿಸಿದ್ದರೆ. ಎಂಪಿ. ರವೀಂದ್ರ 50,937 ಮತಗಳಿಸಿ ಸೋತಿದ್ದಾರೆ.

### ಚಿತ್ರದುರ್ಗ



| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ |
|---|---|---|
| 01 | 00 | 05 |

#### ಕೋಟೆ ಮೇಲೇರಿದ 'ಕೇಸರಿ' ಪತಾಕೆ

**ಚಿತ್ರದುರ್ಗ:** ಕೋಟೆನಾಡು ಚಿತ್ರದುರ್ಗದಲ್ಲಿ ನರೇಂದ್ರ ಮೋದಿ ಸುನಾಮಿ ಆವರಿಸಿದ್ದು, ಅಮಿತ್ ಶಾ ಅವರ ಚಾಣಾಕ್ಷ ನಡೆ ಗೆದ್ದಿದೆ. ಯಡಿಯೂರಪ್ಪ ಅವರ ಜಾತಿ ಲೆಕ್ಕಚಾರ ಒಲಿದಿದ್ದು, ಕಳೆದ ಬಾರಿ ಸಚಿವರು ಸೇರಿ ನಾಲ್ಕು ಸ್ಥಾನವಿದ್ದ ಕಾಂಗ್ರೆಸ್ ಒಂದಕ್ಕೆ ಕುಸಿದಿದೆ. ಒಂದೇ ಒಂದಿದ್ದ ಬಿಜೆಪಿ ಏಕ್ ದಂ ಐದಕ್ಕೆ ಜಿಗಿದಿದೆ.

ಚಿತ್ರದುರ್ಗದ ಹಾಲಿ ಶಾಸಕ ಬಿಜೆಪಿ ಅಭ್ಯರ್ಥಿ ಜಿ.ಎಚ್.ತಿಪ್ಪಾರೆಡ್ಡಿ ಅವರು ಕಾಂಗ್ರೆಸ್‌ನ ಡಾ.ಹನುಮಲಿ ಷಣ್ಮುಖಪ್ಪ ವರನ್ನು ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹೊಳಲ್ಕೆರೆಯ ಸಮಾಜ ಕಲ್ಯಾಣ ಸಚಿವ ಸಚಿವ ಎಚ್. ಆಂಜನೇಯ, ಮಾಜಿ ಶಾಸಕ ಎಂ. ಚಂದ್ರಪ್ಪ ವಿರುದ್ಧ 40,186 ಮತಗಳಿಂದ ಹೀನಾಯ ಸೋಲುಂಡಿದ್ದಾರೆ. ಹೊಸದುರ್ಗದಲ್ಲಿ ಗೂಳಿಹಟ್ಟಿ ಶೇಖರ್ 25,992 ಮತಗಳ ಅಂತರದಿಂದ ಹಾಲಿ ಕಾಂಗ್ರೆಸ್ ಶಾಸಕ ಬಿ.ಜಿ.ಗೋವಿಂದಪ್ಪರನ್ನು ಸೋಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹಿರಿಯೂರಿನಲ್ಲಿ ಕಾಂಗ್ರೆಸ್‌ನ ಹಾಲಿ ಶಾಸಕ ಡಿ.ಸುಧಾಕರ್‌ಗೆ ಹ್ಯಾಟ್ರಿಕ್ ಬಾರಿಸುವಲ್ಲಿ ವಿಫಲವಾಗಿದ್ದು, ಬಿಜೆಪಿಯ ಪೂರ್ಣಿಮಾ ಶ್ರೀನಿವಾಸ್ ಅವರು 12,875 ಮತಗಳಿಂದ ಪ್ರಥಮ ಬಾರಿಗೆ ಕಮಲ ಅರಳಿಸಿದ ಜಿಲ್ಲೆಯ ಏಕೈಕ ಮಹಿಳಾ ಶಾಸಕಿಯಾಗಿದ್ದಾರೆ.

ಮೊಳಕಾಲ್ಮೂರಿನಲ್ಲಿ ಬಿಜೆಪಿಯ ಶ್ರೀರಾಮುಲು 42,045 ಮತಗಳಿಂದ ಗೆಲುವು ಸಾಧಿಸಿದರೆ, ಚಳ್ಳಕೆರೆಯಲ್ಲಿ ಕಾಂಗ್ರೆಸ್‌ನ ಶಾಸಕ ಟಿ. ರಘುಮೂರ್ತಿ ಮತ್ತೆ ಶಾಸಕರಾಗಿ ಕಾಂಗ್ರೆಸ್ ಮರಿಯಾದೆ ಉಳಿಸಿದ್ದಾರೆ. ಮೈತ್ರಿ ಸರಕಾರವಾದಲ್ಲಿ ಇಲ್ಲಿ ಕಾಂಗ್ರೆಸ್‌ನ ಏಕೈಕ ಶಾಸಕರಾಗಿರುವ ಹಿನ್ನಲೆಯಲ್ಲಿ ಮಂತ್ರಿ ಭಾಗ್ಯ ಸಿಗುವ ಲಕ್ಷಣಗಳಿವೆ.

### ಶಿವಮೊಗ್ಗ



| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ |
|---|---|---|
| 00 | 06 | 01 |

#### ಬಿಜೆಪಿ ಅಖಾಡದಲ್ಲಿ ಕಾಂಗ್ರೆಸ್‌ಗೆ ಛೀಮಾರಿ

**ಶಿವಮೊಗ್ಗ:** ಜಿಲ್ಲೆಯಲ್ಲಿ 2008ರ ವಿಧಾನಸಭಾ ಚುನಾವಣೆ 2018ರಲ್ಲೂ ಮರುಕಳಿಸಿದ್ದು, ಜಿಲ್ಲೆಯ ಮತದಾರ ಕಮಲಕ್ಕೆ ತಮ್ಮ ಸಹಮತ ವ್ಯಕ್ತಪಡಿಸಿ ಜಿಲ್ಲೆಯ 7 ಸ್ಥಾನದಲ್ಲಿ 6 ಸ್ಥಾನ ಬಿಜೆಪಿಗೆ ಲಭ್ಯವಾಗುವಂತೆ ಮಾಡಿದ್ದಾನೆ.

ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿ, ಬಿ.ಎಸ್.ಯಡಿಯೂರಪ್ಪರ ತವರು ಜಿಲ್ಲೆ ಶಿವಮೊಗ್ಗದಲ್ಲಿ ಕಮಲ ಅರಳಿದ್ದು, ಈ ಚುನಾವಣೆಯಲ್ಲಿ ಭಾರೀ ಅಂತರದಲ್ಲಿ ಶಿಕಾರಿಪುರದಲ್ಲಿ ಗೆಲುವು ಸಾಧಿಸಿದ ಬಿಎಸ್‌ವೈ, ತಾವು ಸಮರ್ಥ ನಾಯಕ ಎಂದು ಸಾಬೀತುಪಡಿಸಿದ್ದಾರೆ. ಜತೆಗೆ ಜಿಲ್ಲೆಯ 5 ಜನರನ್ನು ಗೆಲ್ಲಿಸಿ ಜಿಲ್ಲೆಯಲ್ಲಿ ಪ್ರಾಬಲ್ಯ ಮೆರೆದಿದ್ದಾರೆ.

ಜಿಲ್ಲೆಯಲ್ಲಿ ಅಭಿವೃದ್ಧಿ ಜಪ ಮಾಡಿ ಹೆಸರಾಗಿದ್ದ ಕಂದಾಯ ಸಚಿವರಾಗಿ ಕಾರ್ಯ ನಿರ್ವಹಿಸಿದ್ದ ಕಾಗೋಡು ತಿಮ್ಮಪ್ಪ ಹಾಗೂ ಶಿಕ್ಷಣ ಸಚಿವರಾಗಿದ್ದ ತೀರ್ಥಹಳ್ಳಿಯ ಕಿಮ್ಮನೆ ರತ್ನಾಕರ್ ಸೋತು, ಜಿಲ್ಲೆಯಲ್ಲಿ ಕಾಂಗ್ರೆಸ್ ವಿರೋಧಿ ಅಲೆ ಸೃಷ್ಠಿಯಾಗಿದೆ. 2004ರವರೆಗೂ ಕಾಂಗ್ರೆಸ್ ವಶದಲ್ಲಿದ್ದ ಜಿಲ್ಲೆ, 2004ರ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿ, 2008ರಲ್ಲಿಯೂ ಐದು ಕ್ಷೇತ್ರದಲ್ಲಿ ಬಿಜೆಪಿ ಜಯಿಸಿತು. ಈ ಬಾರಿ 7ರಲ್ಲಿ 6 ಕ್ಷೇತ್ರ ಗೆದ್ದು ಭದ್ರಕೋಟೆ ಕಟ್ಟಿಕೊಂಡಿದೆ. ಈ ಬಾರಿ ಜೆಡಿಎಸ್‌ನ್ನು ತಿರಸ್ಕರಿಸಿದ ಮತದಾರರು, ಕಮಲಕ್ಕೆ ಬಹುಮತ ನೀಡಿದ್ದಾರೆ.

ಭದ್ರಾವತಿಯಲ್ಲಿ ಕಾಂಗ್ರೆಸ್‌ನ ಬಿ.ಕೆ. ಸಂಗಮೇಶ್ ವೈಯಕ್ತಿಕ ಬಲದಿಂದ ಗೆಲುವು ಪಡೆದಿದ್ದಾರೆ. ಶಿಕಾರಿಪುರ ಬಿಎಸ್‌ವೈ, ಶಿವಮೊಗ್ಗ ಕೆ.ಎಸ್. ಈಶ್ವರಪ್ಪ, ಸೊರಬ ಕುಮಾರ್ ಬಂಗಾರಪ್ಪ, ಸಾಗರ ಹರತಾಳು ಹಾಲಪ್ಪ, ತೀರ್ಥಹಳ್ಳಿ ಅರಗ ಜ್ಞಾನೇಂದ್ರ, ಶಿವಮೊಗ್ಗ ಗ್ರಾಮಾಂತರ ಕೆ.ಬಿ. ಅಶೋಕ ನಾಯ್ಕ ಕಮಲ ಅರಳಿಸಿದ್ದಾರೆ.

### ಚಿಕ್ಕಬಳ್ಳಾಪುರ



| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ |
|---|---|---|
| 04 | 00 | 01 |

#### ಖಾತೆ ತೆರೆಯದ ಬಿಜೆಪಿ

**ಚಿಕ್ಕಬಳ್ಳಾಪುರ:** ಜಿಲ್ಲೆಯ 5 ಕ್ಷೇತ್ರಗಳಲ್ಲಿ ಕಾಂಗ್ರೆಸ್ 4 ಸ್ಥಾನಗಳಲ್ಲಿ ಪ್ರಚಂಡ ಗೆಲುವು ಸಾಧಿಸಿದ್ದು, 1ರಲ್ಲಿ ಜೆಡಿಎಸ್ ಜಯಭೇರಿ ಬಾರಿಸಿದೆ. ಗೌರಿಬಿದನೂರು ಕ್ಷೇತ್ರದಲ್ಲಿ ಎನ್.ಎಚ್.ಶಿವಶಂಕರರೆಡ್ಡಿ ಒಟ್ಟು 68,608 ಮತ ಪಡೆದಿದ್ದು, ಜೆಡಿಎಸ್‌ನ ಸಿ.ಆರ್.ನರಸಿಂಹಮೂರ್ತಿಯನ್ನು 8776 ಮತಗಳ ಅಂತರದಿಂದ ಸೋಲಿಸಿದ್ದಾರೆ. ಬಾಗೇಪಲ್ಲಿಯಲ್ಲಿ ಕಾಂಗ್ರೆಸ್‌ನ ಎಸ್.ಎನ್. ಸುಬ್ಬಾರೆಡ್ಡಿ ಒಟ್ಟು 65,710 ಮತ ಪಡೆದು ಪ್ರತಿಸ್ಪರ್ಧಿ ಸಿಪಿಎಂನ ಜಿ.ವಿ. ಶ್ರೀರಾಮರೆಡ್ಡಿ ವಿರುದ್ಧ 14,013 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಡಾ.ಕೆ. ಸುಧಾಕರ್ 82006 ಮತ ಪಡೆದು ಜೆಡಿಎಸ್‌ನ ಕೆ.ಪಿ.ಬಚ್ಚೇಗೌಡ ವಿರುದ್ಧ 30431 ಮತಗಳ ಅಂತರದಿಂದ ಗೆದ್ದಿದ್ದಾರೆ.ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ವಿ.ಮುನಿಯಪ್ಪ 76240 ಮತ ಪಡೆದು ಪ್ರತಿಸ್ಪರ್ಧಿ ಜೆಡಿಎಸ್‌ನ ಬಿ.ಎನ್.ರವಿಕುಮಾರ್ ವಿರುದ್ಧ 9709 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಚಿಂತಾಮಣಿ ವಿಧಾನಸಭಾ ಕ್ಷೇತ್ರದಲಿ ಜೆಡಿಎಸ್‌ನ ಜೆ.ಕೆ. ಕೃಷ್ಣಾರೆಡ್ಡಿ ಒಟ್ಟು 86923 ಮತ ಪಡೆದು ಪ್ರತಿಸ್ಪರ್ಧಿ ಭಾರತೀಯ ಪ್ರಜಾ ಪಕ್ಷದ ಡಾ.ಎಂ.ಸಿ.ಸುಧಾಕರ್‌ರನ್ನು 5667 ಮತಗಳ ಅಂತರದಿಂದ ಸೋಲಿಸಿದ್ದಾರೆ. ವಿಶೇಷ ಎಂದರೆ ಶಿಡ್ಲಘಟ್ಟ ಕ್ಷೇತ್ರ ಹೊರತು ಪಡಿಸಿ ಜಿಲ್ಲೆಯ 4 ಕ್ಷೇತ್ರಗಳಲ್ಲಿ 2013ರ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದವರೇ ಈ ಬಾರಿಯೂ ಮತ್ತೊಮ್ಮೆ ಆಯ್ಕೆಯಾಗಿದ್ದಾರೆ. ಆದರೆ, ಶಿಡ್ಲಘಟ್ಟದಲ್ಲಿ ಎಂ. ರಾಜಣ್ಣಗೆ ಬದಲಾಗಿ ಕಾಂಗ್ರೆಸ್‌ನ ವಿ.ಮುನಿಯಪ್ಪ ಆಯ್ಕೆಯಾಗಿದ್ದಾರೆ.

### ತುಮಕೂರು



| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ |
|---|---|---|
| 03 | 04 | 04 |

#### ಜೆಡಿಎಸ್- ಬಿಜೆಪಿ ಸಮಬಲ

**ತುಮಕೂರು:** ಜಿಲ್ಲೆಯಲ್ಲಿ ಭಾರೀ ಪೈಪೋಟಿಯೊಂದಿಗೆ ನಡೆದ ಚುನಾವಣಾ ಕಾಳಗಕ್ಕೆ ಅಂತಿಮ ತೆರೆಬಿದ್ದಿದ್ದು, ಜೆಡಿಎಸ್ 4, ಬಿಜೆಪಿ 4 ಕ್ಷೇತ್ರ ಗೆಲುವು ಸಾಧಿಸಿವೆ. ಜೆಡಿಎಸ್ ಬಿಜೆಪಿ ಸಮಬಲ ಸಾಧಿಸಿದ್ದು, ಕಾಂಗ್ರೆಸ್ 3ಕಡೆ ಗೆದ್ದಿದೆ. ಘಟಾನುಘಟಿಗಳೇ ಸೋತಿದ್ದಾರೆ. 2013ರ ಚುನಾವಣೆಯಲ್ಲಿ ಬಿಜೆಪಿ 1, ಕಾಂಗ್ರೆಸ್ 4, ಜೆಡಿಎಸ್ 6 ಸ್ಥಾನ ಗಳಿಸಿಕೊಂಡಿತ್ತು. ಆದರೆ ಈ ಬಾರಿ ಜೆಡಿಎಸ್ 2 ಸ್ಥಾನವನ್ನು ಕಳೆದುಕೊಂಡಿದ್ದು, ಜೆಡಿಎಸ್‌ನ ಗುಬ್ಬಿ ಶಾಸಕ ಶ್ರೀನಿವಾಸ್ ನಾಲ್ಕನೇ ಬಾರಿ ಗೆದ್ದು ಇತಿಹಾಸ ಸೃಷ್ಟಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಏಕೈಕ ಬಿಜೆಪಿ ಶಾಸಕರಾಗಿ ಸುರೇಶ್‌ಗೌಡ ಗೆಲುವು ಸಾಧಿಸಿದ್ದರು. ಈ ಬಾರಿ ಹ್ಯಾಟ್ರಿಕ್ ಬಾರಿಸಲು ಎಲ್ಲಾ ರೀತಿಯ ಪ್ರಯತ್ನ ಮಾಡಿದ್ದರೂ ಪ್ರಯೋಜನವಾಗಿಲ್ಲ. ಈ ಬಾರಿ ಬಿಜೆಪಿ ತುಮಕೂರು ನಗರ, ತಿಪಟೂರು, ತುರುವೇಕೆರೆ, ಚಿಕ್ಕ ನಾಯಕನ ಹಳ್ಳಿ ಕ್ಷೇತ್ರಗಳಲ್ಲಿ ಮೇಲ್ಮೆ ಸಾಧಿಸಿದೆ. ಆ ಮೂಲಕ ಜಿಲ್ಲೆಯಲ್ಲಿ ಈ ಸಲ ಬಿಜೆಪಿ ಸ್ಥಾನಗಳನ್ನು ಹೆಚ್ಚಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಜಿಲ್ಲೆಯ ಗುಬ್ಬಿ ಕ್ಷೇತ್ರದಲ್ಲಿ ಜೆಡಿಎಸ್‌ನ ಎಸ್.ಆರ್. ಶ್ರೀನಿವಾಸ್ ನಾಲ್ಕನೇ ಬಾರಿಗೆ ಜಯಗಳಿಸಿದ್ದಾರೆ. ಈ ಬಾರಿ ಇವರನ್ನು ಸೋಲಿಸಲೇಬೇಕು ಎಂದು ಇತರರು ಭಾರಿ ರಣತಂತ್ರ ಹೆಣೆದಿದ್ದರೂ ಸಹ ಸೋಲಿಸಲು ಸಾಧ್ಯವಾಗಿಲ್ಲ. ಅಪಾರ ಜನ ಬೆಂಬಲ ಅವರ ನೆರವಿಗೆ ಬಂದಿದೆ. ಬಿಜೆಪಿಯ ಸುರೇಶ್ ಗೌಡಗೆ ಗೆಲುವು ಈ ಬಾರಿ ಕೈ ಹಿಡಿಯಲಿಲ್ಲ. ಕಾಂಗ್ರೆಸ್ ಮೂರು ಸ್ಥಾನಗಳಿಗೆ ಮಾತ್ರ ತೃಪ್ತಿಪಟ್ಟುಕೊಳ್ಳಬೇಕಾಯಿತು.

### ಚಿಕ್ಕಮಗಳೂರು



| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ |
|---|---|---|
| 01 | 04 | 00 |

#### ಜೆಡಿಎಸ್ ವಾಶ್ ಔಟ್

**ಚಿಕ್ಕಮಗಳೂರು:**ಮಲೆನಾಡಿನಲ್ಲಿ ಮತದಾರ ಕಮಲ ಅರಳಿಸಿದ್ದಾನೆ. ಕಾಂಗ್ರೆಸ್ ಹಾಗೂ ಜೆಡಿಎಸ್ ಹೆಣೆದಿದ್ದ ರಣತಂತ್ರ ಕಮಲದ ಮುಂದೆ ಮಂಕಾಗಿದೆ. ಐದು ವಿಧಾನಸಭಾ ಕ್ಷೇತ್ರ ಹೊಂದಿರುವ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಾಲ್ಕು ಕ್ಷೇತ್ರಗಳನ್ನು ಬಿಜೆಪಿ ಗೆದ್ದಿದೆ. ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದಿಂದ ಮೂರು ಬಾರಿ ಶಾಸಕರಾಗಿದ್ದ ಸಿ.ಟಿ.ರವಿ ನಾಲ್ಕನೇ ಬಾರಿಯೂ ವಿಜಯದ ನಗೆ ಬೀರಿದ್ದಾರೆ. ಶಾಸಕ ಸಿ.ಟಿ.ರವಿ ಎದುರು ಕಾಂಗ್ರೆಸ್‌ನ ಬಿ.ಎಲ್. ಶಂಕರ್ ಹಾಗೂ ಜೆಡಿಎಸ್ ಅಭ್ಯರ್ಥಿ ಬಿ.ಎಚ್. ಹರೀಶ್ ಸೋಲೊಪ್ಪಿಕೊಂಡಿದ್ದಾರೆ. ಅದೇ ರೀತಿಯಾಗಿ ಕಡೂರು ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಜಯಭೇರಿ ಬಾರಿಸಿದೆ. ವೈಎಸ್‌ವಿ ದತ್ತ ಹಾಗೂ ಕ್ಷೇತ್ರದ ಹೊಸ ಮುಖ ಕಾಂಗ್ರೆಸ್‌ನ ಎ. ಆರ್ ಆನಂದ್ ಕೇಸರಿ ಆರ್ಭಟಕ್ಕೆ ದೂಳಿಪಟವಾಗಿದ್ದಾರೆ. ತರೀಕೆರೆ ಕ್ಷೇತ್ರದಲ್ಲಿ ಬಿಜೆಪಿಯ ಡಿ.ಎನ್. ಸುರೇಶ್ ಜಯಭೇರಿ ಬಾರಿಸಿದ್ದಾರೆ. ಕಾಂಗ್ರೆಸ್‌ನಿಂದ ಮಾಜಿ ಶಾಸಕ ಎಸ್. ಎಂ. ನಾಗರಾಜ್, ಜೆಡಿಎಸ್‌ನಿಂದ ಟಿ.ಎಂ. ಶಿವಶಂಕರಪ್ಪ, ಪಕ್ಷೇತರರಾಗಿ ಜಿ.ಎಚ್. ಶ್ರೀನಿವಾಸ್ ಹಾಗೂ ಎಚ್.ಎಂ. ಗೋಪಿಕೃಷ್ಣ ಕಣದಲ್ಲಿದ್ದರು.ಮೂಡಿಗೆರೆ ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಕಮಲ ಅರಳಿದೆ. ಕಾಂಗ್ರೆಸ್‌ನ ಪ್ರಬಲ ಅಭ್ಯರ್ಥಿ ಡಾ. ಮೋಟಮ್ಮ ಎದುರು ಬಿಜೆಪಿ ಅಭ್ಯರ್ಥಿ ಎಂ.ಪಿ. ಕುಮಾರಸ್ವಾಮಿ ಗೆಲುವು ಸಾಧಿಸಿದ್ದಾರೆ. ಮೂರು ಬಾರಿ ಶಾಸಕರಾಗಿದ್ದ ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ.ರಾಜೇಗೌಡ ನಡುವೆ ನೆಕ್ ಟು ನೆಕ್ ಫೈಟ್ ನಡೆಯಿತು.

### ಕೋಲಾರ



| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ |
|---|---|---|
| 05 | 00 | 01 |

#### ಚಿನ್ನದ ನಾಡಲ್ಲಿ ಕೈ ಜಯಭೇರಿ

**ಕೋಲಾರ:** ಚಿನ್ನದ ನಾಡಿನಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿದ್ದು, ಆರು ಕ್ಷೇತ್ರಗಳಲ್ಲಿ 5 ಕಡೆ ವಿಜಯ ಪತಾಕೆ ಹಾರಿಸಿದೆ. ಜೆಡಿಎಸ್ ಏಕೈಕ ಸ್ಥಾನವನ್ನು ಉಳಿಸಿಕೊಂಡಿದ್ದು, ಕಮಲಪಡೆ ಇದ್ದ ಸ್ಥಾನವನ್ನು ಕಳೆದುಕೊಂಡಿದೆ. ಪಕ್ಷೇತರ ಶಾಸಕ ವರ್ತೂರ್ ಪ್ರಕಾಶ್ ಮೂರನೇ ಸ್ಥಾನಕ್ಕೆ ಕುಸಿಯುವ ಮೂಲಕ ಗಂಟುಮೂಟೆ ಕಟ್ಟಿದ್ದಾರೆ. ಬಂಗಾರಪೇಟೆ, ಮಾಲೂರು, ಶ್ರೀನಿವಾಸಪುರ, ಕೆಜಿಎಫ್ ಮತ್ತು ಮುಳಬಾಗಲಿನಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿದ್ದು, ಕೋಲಾರ ಕ್ಷೇತ್ರದಲ್ಲಿ ದಳಪತಿ ಶ್ರೀನಿವಾಸಗೌಡರು ಗೆಲುವು ಸಾಧಿಸಿದ್ದಾರೆ. ಬಂಗಾರಪೇಟೆಯಲ್ಲಿ ಶಾಸಕ ನಾರಾಯಣಸ್ವಾಮಿ 70,176 ಮತಗಳನ್ನು ಪಡೆಯುವ ಮೂಲಕ ಸಮೀಪ ಸ್ಪರ್ಧಿ ಜೆಡಿಎಸ್‌ನ ಮಲ್ಲೇಶ್‌ಬಾಬು ಅವರನ್ನು 21,400 ಮತಗಳ ಅಂತರದಿಂದ ಸೋಲಿಸಿದ್ದಾರೆ. ಮಾಲೂರಿನಲ್ಲಿ ಕಾಂಗ್ರೆಸ್ ನಂಜೇಗೌಡರು 74,997 ಮತಗಳನ್ನು ಪಡೆದು ಪ್ರತಿಸ್ಪರ್ಧಿ ಜೆಡಿಎಸ್‌ನ ಮಂಜುನಾಥಗೌಡರನ್ನು 17,805 ಮತಗಳ ಅಂತರದಿಂದ ಪರಾಭವಗೊಳಿಸಿದ್ದಾರೆ. ಶ್ರೀನಿವಾಸಪುರ ಕಾಂಗ್ರೆಸ್ ಅಭ್ಯರ್ಥಿ ಕೆ.ಆರ್. ರಮೇಶ್‌ಕುಮಾರ್ 92,531 ಮತ ಪಡೆದು ಜೆಡಿಎಸ್‌ನ ವೆಂಕಟಶಿವಾರೆಡ್ಡಿ ಅವರನ್ನು 10,630 ಮತಗಳಿಂದ ಸೋಲಿಸಿದ್ದಾರೆ. ಸಂಸದ ಕೆ.ಎಚ್. ಮುನಿಯಪ್ಪ ಪುತ್ರಿ ರೂಪಾಶಶಿಧರ್ 70,715 ಮತ ಪಡೆದಿದ್ದಾರೆ. ಮುಳಬಾಗಲಿನಲ್ಲಿ ಕಾಂಗ್ರೆಸ್‌ನ ನಾಗೇಶ್ 73,624 ಮತ ಪಡೆದಿದ್ದಾರೆ. ಜೆಡಿಎಸ್‌ನ ಕೆ.ಶ್ರೀನಿವಾಸಗೌಡ, 81,487 ಮತ ಪಡೆದು ಕಾಂಗ್ರೆಸ್‌ನ ಸೈಯದ್ ಜಮೀರ್ ಪಾಷರನ್ನು ಪರಾಭವಗೊಳಿಸಿದ್ದಾರೆ.

### ಉಡುಪಿ



| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ |
|---|---|---|
| 00 | 05 | 00 |

#### ಕಾಂಗ್ರೆಸ್ ಧೂಳಿಪಟ

**ಉಡುಪಿ:** ಜಿಲ್ಲೆಯ ಐದು ವಿಧಾನಸಭೆ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವಿನ ನಗೆ ಬೀರಿದೆ. ಕಾಂಗ್ರೆಸ್ ಹೀನಾಯ ಸೋಲು ಕಂಡಿದೆ.ಉಡುಪಿ, ಕಾಪು, ಕಾರ್ಕಳ, ಕುಂದಾಪುರ ಹಾಗೂ ಬೈಂದೂರು ಈ ಐದು ಕ್ಷೇತ್ರಗಳಲ್ಲಿ ಬಿಜೆಪಿಯ ಅಬ್ಬರಕ್ಕೆ ಕಾಂಗ್ರೆಸ್ ಧೂಳಿಪಟವಾಗಿದೆ. ಉಡುಪಿ ಕ್ಷೇತ್ರದಲ್ಲಿ ಮಾಜಿ ಶಾಸಕ ಕೆ. ರಘುಪತಿ ಭಟ್ ಅವರು ಸಚಿವ ಪ್ರಮೋದ್ ಮಧ್ವರಾಜ್‌ರನ್ನು 12,044 ಮತಗಳ ಅಂತರದಿಂದ ಸೋಲಿಸಿ, ಸತತ ಮೂರನೇ ಗೆಲುವು ದಾಖಲಿಸಿದ್ದಾರೆ. ಪ್ರಮೋದ್ ಮಧ್ವರಾಜ್ ವಿರುದ್ಧ ಅವರಿಗೆ ಇದು ಎರಡನೇ ಗೆಲುವು ಆಗಿದೆ.

ಕುಂದಾಪುರ ಕ್ಷೇತ್ರದಲ್ಲಿ ಹಾಲಾಡಿ ಶ್ರೀನಿವಾಸ್ ಶೆಟ್ಟಿ ಅವರು ಸತತ ಐದನೇ ಬಾರಿಗೆ ಗೆದ್ದಿದ್ದಾರೆ. ಅವರು ಈ ಬಾರಿ 56413 ಅತ್ಯಧಿಕ ಮತಗಳ ಅಂತರದಿಂದ ಕಾಂಗ್ರೆಸ್‌ನ ರಾಕೇಶ್ ಮಲ್ಲಿ ಅವರನ್ನು ಸೋಲಿಸಿದ್ದಾರೆ. ಕಾಪು ವಿಧಾನಸಭೆ ಕ್ಷೇತ್ರದಲ್ಲಿ ಮಾಜಿ ಶಾಸಕ ಬಿಜೆಪಿಯ ಲಾಲಾಜಿ ಆರ್. ಮೆಂಡನ್ ಅವರು 11,919 ಮತಗಳ ಅಂತರದಿಂದ ಮಾಜಿ ಸಚಿವ ಕಾಂಗ್ರೆಸ್‌ನ ವಿನಯಕುಮಾರ್ ಸೊರಕೆರನ್ನು ಪರಭಾವಗೊಳಿಸಿದ್ದಾರೆ.

ಕಾರ್ಕಳದಲ್ಲಿ ಬಿಜೆಪಿಯ ಸುನಿಲ್ ಕುಮಾರ್ ಅವರು ಕಾಂಗ್ರೆಸ್ ಗೋಪಾಲ ಭಂಡಾರಿಯವರನ್ನು 42,566 ಅತ್ಯಧಿಕ ಮತಗಳ ಅಂತರದಿಂದ ಸೋಲಿಸಿದ್ದಾರೆ. ಆ ಮೂಲಕ ಕಾರ್ಕಳದಲ್ಲಿ ಮತ್ತೊಮ್ಮೆ ಬಿಜೆಪಿಯ ಅಧಿಪತ್ಯ ಸ್ಥಾಪಿಸಿದ್ದಾರೆ. ಬೈಂದೂರಿನಲ್ಲಿ ಕಾಂಗ್ರೆಸ್‌ನ ಶಾಸಕ ಕೆ. ಗೋಪಾಲ ಪೂಜಾರಿ ಬಿಜೆಪಿಯ ಸುಕುಮಾರ್ ಶೆಟ್ಟಿ ಅವರ ವಿರುದ್ಧ 24393 ಮತಗಳ ಅಂತರದಿಂದ ಹೀನಾಯ ಸೋಲು ಕಂಡಿದ್ದಾರೆ.

### ಬೆ. ಗ್ರಾಮಾಂತರ



| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ |
|---|---|---|
| 02 | 00 | 02 |

#### ಜೆಡಿಎಸ್ ಕಾಂಗ್ರೆಸ್ ಸಮಬಲ

**ಬೆಂಗಳೂರು:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ಕ್ಷೇತ್ರಗಳಲ್ಲಿ ಜೆಡಿಎಸ್ ಹಾಗೂ ಕಾಂಗ್ರೆಸ್ ತಲಾ ಎರಡು ಕ್ಷೇತ್ರಗಳನ್ನು ಹಂಚಿಕೊಂಡಿವೆ. ಕಳೆದ ಚುನಾವಣೆಯಲ್ಲಿ ಮೂರು ಕ್ಷೇತ್ರಗಳಲ್ಲಿ ಹಿಡಿತ ಹೊಂದಿದ್ದ ಕಾಂಗ್ರೆಸ್ ಈ ಬಾರಿ ಒಂದು ಕ್ಷೇತ್ರವನ್ನು ಜೆಡಿಎಸ್‌ಗೆ ಕಳೆದುಕೊಂಡಿದೆ. ಹಾಗಾಗಿ ಈ ಜಿಲ್ಲೆಯಲ್ಲಿ ಜೆಡಿಎಸ್‌ಗೆ ಲಾಭವೇ ಆಗಿದೆ. ನೆಲಮಂಗಲ ಮೀಸಲು ಕ್ಷೇತ್ರದಲ್ಲಿ ಜೆಡಿಎಸ್‌ನ ಡಾ.ಕೆ ಶ್ರೀನಿವಾಸ ಮೂರ್ತಿ ಎರಡನೇ ಬಾರಿಗೆ ಗೆಲುವು ಸಾಧಿಸಿದ್ದಾರೆ. ಅವರು ತಮ್ಮ ಸಮೀಪದ ಪ್ರತಿ ಸ್ಪರ್ಧಿ ಕಾಂಗ್ರೆಸ್‌ನ ಆರ್. ನಾರಾಯಣ ಸ್ವಾಮಿ ಅವರನ್ನು 24,321 ಮತಗಳ ಅಂತರದಿಂದ ಮಣಿಸಿದ್ದಾರೆ. ಕಾಂಗ್ರೆಸ್ ವಶದಲ್ಲಿದ್ದ ದೇವನಹಳ್ಳಿ ಮೀಸಲು ಕ್ಷೇತ್ರದಲ್ಲಿ ಜೆಡಿಎಸ್ ವಿಜಯ ಸಾಧಿಸಿದೆ. ಜೆಡಿಎಸ್ ಅಭ್ಯರ್ಥಿ ಎಲ್.ಎನ್. ನಾರಾಯಣ ಸ್ವಾಮಿ ಕಾಂಗ್ರೆಸ್‌ನ ಶಾಸಕ ವೆಂಕಟಸ್ವಾಮಿ ಅವರ ವಿರುದ್ಧ 17,010 ಮತಗಳ ಅಂತರದ ವಿಜಯ ದಾಖಲಿಸಿ ಇದೇ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸುತ್ತಿದ್ದಾರೆ. ದೊಡ್ಡಬಳ್ಳಾಪುರದಲ್ಲಿ ಕಾಂಗ್ರೆಸ್‌ನ ಟಿ. ವೆಂಕಟರವ ು ಣಯ್ಯ, ಜೆಡಿಎಸ್‌ನ ಮುನೇಗೌಡ ವಿರುದ್ಧ 10 ಸಾವಿರ ಮತಗಳ ಅಂತರದಿಂದ ಎರಡನೇ ಬಾರಿಗೆ ಗೆಲುವು ಸಾಧಿಸಿದ್ದಾರೆ. ಹೊಸಕೋಟೆಯ ಕಾಂಗ್ರೆಸ್ ಮತ್ತೆ ಗೆಲುವಿನ ನಗೆ ಬೀರಿದೆ. ಎಂಟಿಬಿ ನಾಗರಾಜ್, ಬಿಜೆಪಿಯ ಪ್ರತಿ ಸ್ಪರ್ಧಿ ಶರತ್ ಬಚ್ಚೇಗೌಡ ರನ್ನು 7,597 ಮತಗಳ ಅಂತರದಿಂದ ಪರಾಭವಗೊಳಿಸಿದ್ದಾರೆ. ಶರತ್ ಮಾಜಿ ಸಚಿವ ಬಿ.ಎನ್,ಬಚ್ಚೇಗೌಡರ ಪುತ್ರ. ಬಚ್ಚೇಗೌಡರು ಅನಾರೋಗ್ಯದಿಂದ ಪುತ್ರನಿಗೆ ಟಿಕೆಟ್ ಕೊಡಿಸುವಲ್ಲಿ ಸಫಲರಾಗಿದ್ದರೂ ತಮ್ಮ ಪುತ್ರನ ಕನಸನ್ನು ನನಸು ಮಾಡುವಲ್ಲಿ ವಿಫಲರಾಗಿದ್ದಾರೆ.

### ದ. ಕನ್ನಡ



| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ |
|---|---|---|
| 01 | 07 | 00 |

#### ಮುಖ ಸುಟ್ಟುಕೊಂಡ ಕಾಂಗ್ರೆಸ್

**ದಕ್ಷಿಣ ಕನ್ನಡ:** ದ. ಕ. ಜಿಲ್ಲೆಯ 8 ವಿಧಾನಸಭಾ ಕ್ಷೇತ್ರದಲ್ಲಿ 7 ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ದಾಖಲಿಸಿದೆ. ಜಿಲ್ಲೆಯ ಜನರು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರಕ್ಕೆ ಮನ್ನಣೆ ನೀಡಬಹುದೆಂದು ವಿಶ್ಲೇಷಿಸಲಾಗಿತ್ತು. ಆದರೆ ಅದು ಹುಸಿಯಾಗಿದೆ. ಈ ಅನಿರೀಕ್ಷಿತ ಬೆಳವಣಿಗೆಯಿಂದ ಕಾಂಗ್ರೆಸ್ ಗೆ ಆಘಾತವಾಗಿದೆ. 2013 ರ ಚುನಾವಣೆಯಲ್ಲಿ 8 ಸ್ಥಾನಗಳ ಪೈಕಿ7 ಕಾಂಗ್ರೆಸ್ ಹಾಗೂ 1 ಸ್ಥಾನ ಬಿಜೆಪಿ ಪಡೆದುಕೊಂಡಿತ್ತು. ಆದರೆ ಈ ಬಾರಿ ಬಿಜೆಪಿ 7 ಸ್ಥಾನದಲ್ಲಿ ಗೆಲುವು ಸಾಧಿಸಿದೆ. ಕಾಂಗ್ರೆಸ್ 1 ರಲ್ಲಿ ಗೆದ್ದಿದೆ. ಮಂಗಳೂರು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯು. ಟಿ. ಖಾದರ್ 20 ಸಾವಿರಕ್ಕು ಅಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಇದು ಕಳೆದ ಬಾರಿ ಪಡೆದ ಮತಗಳಿಗಿಂತ ತೀರಾ ಕಡಿಮೆಯಾಗಿದೆ.

ಉಳಿದಂತೆ ಬೆಳ್ತಂಗಡಿಯಲ್ಲಿ ಬಿಜೆಪಿಯ ಹರೀಶ್ ಪೂಂಜ, ಪುತ್ತೂರಿನಲ್ಲಿ ಸಂಜೀವ ಮಠಂದೂರು, ಸುಳ್ಯದಲ್ಲಿ ಎಸ್. ಅಂಗಾರ, ಬಂಟ್ವಾಳದಲ್ಲಿ ರಾಜೇಶ್ ನಾಯ್ಕ್, ಮಂಗಳೂರು ದಕ್ಷಿಣದಲ್ಲಿ ವೇದವ್ಯಾಸ ಕಾಮತ್, ಮಂಗಳೂರು ಉತ್ತರದಲ್ಲಿ ಡಾ. ಭರತ್ ಶೆಟ್ಟಿ, ಮೂಡಬಿದಿರೆಯಲ್ಲಿ ಉಮಾನಾಥ ಕೋಟ್ಯಾನ್ ಜಯಗಳಿಸಿದರು. ಒಂದೊಮ್ಮೆ ಬಿಜೆಪಿಯ ಭದ್ರಕೋಟೆ ಎನಿಸಿದ್ದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಬಾರಿ(2013) ಒಟ್ಟು 8 ಕ್ಷೇತ್ರಗಳಲ್ಲಿ ಏಳೂ ಕ್ಷೇತ್ರಗಳನ್ನು ಕಾಂಗ್ರೆಸ್ ಗೆಲ್ಲುವ ಮೂಲಕ ಬಹುದೊಡ್ಡ ಸಾಧನೆ ಮಾಡಿತ್ತು. ಆದರೆ ಈ ಬಾರಿಯ ಚುನಾವಣೆಯಲ್ಲಿ 8 ಕ್ಷೇತ್ರಗಳಲ್ಲಿ ಏಳು ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದ್ದು, ತನ್ನ ಭದ್ರಕೋಟೆಯನ್ನು ಮರಳಿ ಪಡೆದಿದೆ.

### ಬೆಂಗಳೂರು



| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ |
|---|---|---|
| 11 | 13 | 02 |

#### ಬಿಜೆಪಿ ಪ್ರಾಬಲ್ಯ

**ಬೆಂಗಳೂರು:** ಚುನಾವಣೆ ನಡೆದ ಬೆಂಗಳೂರಿನ 26 ಕ್ಷೇತ್ರಗಳಲ್ಲಿ ಬಿಜೆಪಿ ಮತ್ತೆ ತನ್ನ ಪ್ರಾಬಲ್ಯ ಮೆರೆದಿದೆ. 13 ಕ್ಷೇತ್ರಗಳಲ್ಲಿ ಕಮಲ ಅರಳಿದ್ದರೆ 11 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಾಗೂ 2 ಕ್ಷೇತ್ರಗಳಲ್ಲಿ ಜೆಡಿಎಸ್ ಗೆಲುವಿನ ನಗೆ ಬೀರಿದೆ.

ಬೆಂಗಳೂರನ್ನು ಪ್ರತಿನಿಧಿಸಿದ್ದ ಯಾವೊಬ್ಬ ಸಚಿವರೂ ಪರಾಭವಗೊಂಡಿಲ್ಲದಿರುವುದು ಈ ಬಾರಿಯ ವಿಶೇಷವಾಗಿದೆ. ಸಚಿವರಾದ ಕೆ.ಜೆ. ಜಾರ್ಜ್ ಸರ್ವಜ್ಞನಗರ, ರಾಮಲಿಂಗಾ ರೆಡ್ಡಿ ಬಿಟಿಎಂ ಲೇಔಟ್‌ನಿಂದ, ವಿಜಯನಗರದಿಂದ ಎಂ. ಕೃಷ್ಣಪ್ಪ, ಕೃಷ್ಣ ಭೈರೇಗೌಡ ಬ್ಯಾಟರಾಯನಪುರದಿಂದ ಪುನರಾಯ್ಕೆಗೊಂಡಿದ್ದಾರೆ. ಮಾಜಿ ಸಚಿವ ಜಮೀರ್ ಅಹಮದ್ ಖಾನ್ ಮತ್ತು ಪುಲಿಕೇಶಿ ನಗರದಿಂದ ಅಖಂಡ ಶ್ರೀನಿವಾಸ ಮೂರ್ತಿ, ಮಹಾಲಕ್ಷ್ಮಿ ಲೇ ಔಟ್‌ನಲ್ಲಿ ಜೆಡಿಎಸ್‌ನ ಕೆ. ಗೋಪಾಲಯ್ಯ, ಸ್ಥಾನ ಉಳಿಸಿಕೊಂಡಿದ್ದಾರೆ. ಬಿಜೆಪಿ ವಶದಲ್ಲಿದ್ದ ಹೆಬ್ಬಾಳ ಕ್ಷೇತ್ರವನ್ನು ಕಾಂಗ್ರೆಸ್‌ನ ಭೈರತಿ ಸುರೇಶ್, ಕಾಂಗ್ರೆಸ್ ಹಿಡಿತದಲ್ಲಿದ್ದ ಚಿಕ್ಕಪೇಟೆ ಕ್ಷೇತ್ರದಲ್ಲಿ ಬಿಜೆಪಿಯ ಉದಯ್ ಗರುಡಾಚಾರ್, ದಾಸರಹಳ್ಳಿಯಲ್ಲಿ ಜೆಡಿಎಸ್‌ನ ಮಂಜುನಾಥ್ ಮೊದಲ ಬಾರಿಗೆ ಜಯ ಸಾಧಿಸಿದ್ದಾರೆ.

ಗೋವಿಂದರಾಜನಗರ ಕ್ಷೇತ್ರಗಳಲ್ಲಿ ಪುನರಾಯ್ಕೆ ಬಯಸಿದ್ದ ಪ್ರಿಯಾಕೃಷ್ಣ ಬಿಜೆಪಿ ಮುಖಂಡ ವಿ.ಸೋಮಣ್ಣ ಎದುರು ಸೋಲುಂಡಿದ್ದು, ಮಹದೇವಪುರದಲ್ಲಿ ಅರವಿಂದ ಲಿಂಬಾವಳಿ ಮತ್ತು ಸಿ.ವಿ.ರಾಮನ್ ನಗರ ದಲ್ಲಿ ಎಸ್. ರಘು, ಗಾಂಧಿ ನಗರದಲ್ಲಿ ಕಾಂಗ್ರೆಸ್‌ನ ದಿನೇಶ್ ಗುಂಡೂರಾವ್, ರಾಜಾಜಿ ನಗರದಲ್ಲಿ ಬಿಜೆಪಿಯ ಎಸ್. ಸುರೇಶ್ ಕುಮಾರ್, ಪದ್ಮನಾಭ ನಗರದಲ್ಲಿ ಬಿಜೆಪಿಯ ಆರ್. ಅಶೋಕ್ ವಿಜಯ ಪತಾಕೆ ಹಾರಿಸಿದ್ದಾರೆ.

## ವಿಶ್ಲೇಷಣೆ



-ರವೀಂದ್ರ ರೇಶ್ಮೆ
ಹಿರಿಯ ಪತ್ರಕರ್ತರು

# ಪ್ರತ್ಯೇಕ ಬಾವುಟ, ಪ್ರತ್ಯೇಕ ಧರ್ಮ... ಫಲಿತಾಂಶದ ಪೆಟ್ಟು

ಈ ಬಾರಿಯ ವಿಧಾನಸಭಾ ಚುನಾವಣೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ನಡುವಿನ ಜಿದ್ದಾಜಿದ್ದಿಯ ಚುನಾವಣೆಯಾಗಿರಲಿಲ್ಲ. ಬದಲಾಗಿ ಹಿಂದುಳಿದ ವರ್ಗದ ಮುಖ್ಯಮಂತ್ರಿ ಮತ್ತು ಹಿಂದುಳಿದ ವರ್ಗದ ಪ್ರಧಾನ ಮಂತ್ರಿ ನರೇಂದ್ರ ಮೋದಿ ನಡುವಿನ ಒಂದು ನೇರ ಸಂಘರ್ಷವಾಗಿತ್ತು.

ಕಾಂಗ್ರೆಸ್ ಸರಕಾರ ಧರ್ಮದ ಅಜೆಂಡಾ ಇಟ್ಟುಕೊಂಡು ಚುನಾವಣೆಗೆ ಮುಂದಾಗಿದ್ದರಿಂದ ಅದರ ಪರಿಣಾಮ





ಚುನಾವಣೆಯ ಮೇಲೆ ಬೀರಿದೆ. ಪ್ರತ್ಯೇಕ ಬಾವುಟ, ಪ್ರತ್ಯೇಕ ಧರ್ಮ... ಈ ರೀತಿ ಜನರ ಬಾವನೆಗಳ ಜತೆ ಚೆಲ್ಲಾಟವಾಡಿದ ಹಿನ್ನೆಲೆಯಲ್ಲಿ ಜನರು ಸರಿಯಾದ ತೀರ್ಪನ್ನು ನೀಡಿದ್ದಾರೆ.

ಇದೇ ರೀತಿಯ ಪರಿಸ್ಥಿತಿ ಈ ಹಿಂದೆ ಬಿಜೆಪಿ ಸಹ ಎದುರಿಸಿತ್ತು. 1992 ರಲ್ಲಿ ಬಾಬರಿ ಮಸೀದಿ ಧ್ವಂಸ ಪ್ರಕರಣದ ನಂತರ ಬಿಜೆಪಿ ದೇಶದಲ್ಲಿ ನೆಲ ಕಚ್ಚುವಂತಾಗಿತ್ತು. ನಂತರ ಮತ್ತೆ ಅಭಿವೃದ್ಧಿಯ ಅಜೆಂಡವನ್ನು ಬಿಜೆಪಿ ಇಟ್ಟುಕೊಂಡು ಬಂದ ಹಿನ್ನೆಲೆಯಲ್ಲಿ ದೇಶದಲ್ಲಿ ಮತ್ತೆ ಬಿಜೆಪಿ ಗೆಲುವು ಸಾಧಿಸುತ್ತ ಬಂತು. ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಂಗ್ರೆಸ್ ಸೋಲಿಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಪ್ರತ್ಯೇಕತೆಯ ಜಪ ಬಿಟ್ಟು ಹೊಸ ಪೀಳಿಗೆ ಇಚ್ಚಿಸುವ ಅಭಿವೃದ್ಧಿ ರಾಜಕಾರಣ ಮಾಡಬೇಕು.

**ಕುಟುಂಬ ರಾಜಕಾರಣ ಕಳಂಕ ಅಳಿಸಿದ ಮೋದಿ:** ನರೇಂದ್ರ ಮೋದಿ 6 ದಿನ 21 ರ್‍ಯಾಲಿಗಳನ್ನು ಮಾಡುವ ಮೂಲಕ ಹೊಸ ಅಲೆಯನ್ನು ಸೃಷ್ಟಿಸಿದರು. ಅಲ್ಲದೇ ಬಿ.ಎಸ್ .ಯಡಿಯೂರಪ್ಪನವರ



ಮಗನಿಗೆ ಟಿಕೆಟ್ ನಿರಾಕರಿಸುವಂತಹ ದಿಟ್ಟ ನಿರ್ಧಾರ ಮಾಡುವ ಮೂಲಕ ಕುಟುಂಬ ರಾಜಕಾರಣ ಎಂಬ ಕಳಂಕವನ್ನು ತೊಡೆದು ಹಾಕಿದ್ದಾರೆ. ಈ ರೀತಿ ಹಲವು ಪ್ರಮುಖ ನಿರ್ಧಾರಗಳನ್ನು ಕೈಗೊಂಡಿದ್ದಾರೆ. ಬಿಜೆಪಿ ವೈಚಾರಿಕವಾಗಿ ಇನ್ನೂ ಗಟ್ಟಿಯಾಗಬೇಕು.